ಕೆಲವು ವರ್ಷಗಳ ಹಿಂದೆ ರಾಜ್ಯ ಸರ್ಕಾರ ನಡೆಸುತ್ತಿದ್ದ 'ಕರ್ನಾಟಕ ರಾಜ್ಯ ಲಾಟರಿ' ಮಧ್ಯಮವರ್ಗದ ಲಕ್ಷಾಂತರ ಜನರಲ್ಲಿ ಶ್ರೀಮಂತಿಕೆಯ ಕನಸನ್ನು ಬಿತ್ತುತ್ತಿತ್ತು. ಲಾಟರಿ ಈಗ ನಿಷೇಧಿತ ಕನಸು. ಹಾಗೆಂದು ಯಾರೂ ನಿರಾಶರಾಗಬೇಕಿಲ್ಲ. ಲಾಟರಿಯ ಜಾಗದಲ್ಲೀಗ ಸಿನಿಮಾ ಬಂದಿದೆ. 'ಕರ್ನಾಟಕ ರಾಜ್ಯ ಲಾಟರಿ' ಎನ್ನುವ ನುಡಿಗಟ್ಟನ್ನೀಗ 'ಕನ್ನಡ ಸಿನಿಮಾ ಲಾಟರಿ' ಎಂದು ಬದಲಿಸಿ ಬಳಸಬಹುದು.

ಸಿನಿಮಾ ಎನ್ನುವುದನ್ನು ಲಾಟರಿ ಎನ್ನುವುದಕ್ಕೆ ಕಾರಣಗಳಿವೆ. ಹೂಡಿದ ಹಣ ವಾಪಸ್ಸಾಗುವ ನಂಬಿಕೆ ಇಲ್ಲದಿದ್ದರೂ ನಿರ್ಮಾಪಕ ಕೋಟ್ಯಂತರ ರೂಪಾಯಿ ಬಂಡವಾಳ ಹೂಡುತ್ತಾನೆ. ಟಿಕೆಟ್ ಕೊಂಡು ನೋಡುವ ಪ್ರೇಕ್ಷಕನಿಗೂ ತಾನು ನೋಡುವ ಸಿನಿಮಾದ ಗುಣಮಟ್ಟದ ಖಾತರಿಯಿಲ್ಲ. ಸಿನಿಮಾ ಗೆದ್ದರೆ ನಿರ್ಮಾಪಕನ ಅದೃಷ್ಟ, ಗುಣಮಟ್ಟದ ಮನರಂಜನೆ ದೊರೆತರೆ ಪ್ರೇಕ್ಷಕನ ಅದೃಷ್ಟ. ಪರಿಸ್ಥಿತಿ ಹೀಗಿರುವಾಗ ಸಿನಿಮಾ, ಅದರಲ್ಲೂ ಕನ್ನಡ ಚಲನಚಿತ್ರ 'ಲಾಟರಿ' ಅಲ್ಲದೆ ಇನ್ನೇನು?

ಗಳಿಕೆ–ಗುಣಮಟ್ಟದ ಮಾತುಬಿಡಿ, ಇತ್ತೀಚೆಗೆ ಪ್ರಕಟಗೊಂಡ ಚಲನಚಿತ್ರ ರಾಷ್ಟ್ರಪ್ರಶಸ್ತಿಗಳನ್ನು ನೋಡಿದರೆ – ಕನ್ನಡ ಚಿತ್ರರಂಗದ ಪಾಲಿಗೆ ಪ್ರಶಸ್ತಿಗಳು ಕೂಡ 'ಲಾಟರಿ'ಯಾಗಿ ಪರಿಣಮಿಸಿದಂತಿದೆ. ಒಂದೇ ವರ್ಷ ಹನ್ನೊಂದು ಪ್ರಶಸ್ತಿಗಳು! ಬೆಳ್ಳಿತೆರೆಯ ಇತಿಹಾಸದಲ್ಲಿಯೇ ಇಷ್ಟೊಂದು ಪ್ರಶಸ್ತಿಗಳನ್ನು 'ಸ್ಯಾಂಡಲ್‌ವುಡ್' ಎಂದೂ ಕಂಡಿರಲಿಲ್ಲ. ಮಂಸೋರೆ ನಿರ್ದೇಶನದ 'ನಾತಿಚರಾಮಿ' ಒಂದೇ ಸಿನಿಮಾ ಐದು ಪ್ರಶಸ್ತಿಗಳ ಗರಿಗಳನ್ನು ತುರುಬಿಗೇರಿಸಿಕೊಂಡಿದೆ. ಬರಿ ಲಾಟರಿಯಲ್ಲ – ಇಷ್ಟೊಂದು ಪ್ರಶಸ್ತಿಗಳು ಒಮ್ಮೆಗೇ ದೊರೆತಿರುವುದರಿಂದ ಕನ್ನಡ ಚಿತ್ರೋದ್ಯಮಕ್ಕೆ 'ಬಂಪರ್ ಲಾಟರಿ'ಯೇ ಗಿಟ್ಟಿದೆಯೆನ್ನಬೇಕು. ಲಾಟರಿಯೋ ಮತ್ತೊಂದೋ 'ಪ್ರಶಸ್ತಿಗಳ ಪ್ರವಾಹ'ದ ಹಿನ್ನೆಲೆಯಲ್ಲಿ ಚಿತ್ರರಂಗದಲ್ಲಿ ಸಂಭ್ರಮ ತುಂಬಿಕೊಂಡಿದೆ. ವ್ಯಾಪಾರಿ ಚಿತ್ರಗಳಿಗೆ ಪ್ರಶಸ್ತಿ ಸಂದಿರುವುದರಿಂದ ಗಾಂಧಿನಗರವೂ ಸಂಭ್ರಮಿಸುತ್ತಿದೆ.

ಇರಲಿ, ಇದು ಸಕಾರಣ ಸಂಭ್ರಮ. ಆದರೆ, ಈ ಸಡಗರ ನಮ್ಮ ವಿವೇಕದ ಕಣ್ಣುಗಳನ್ನು ಮುಚ್ಚಬಾರದಲ್ಲವೇ? ಸಾಧನೆಯೆನ್ನುವುದು ಸಂತಸಕ್ಕೆ ಕಾರಣವಾದಂತೆ ವಿಮರ್ಶೆಗೂ ಪ್ರೇರಣೆ ಒದಗಿಸಬೇಕು.

## ದಾಖಲೆ ಬೆಳೆ

ಪುರಸ್ಕೃತ ಚಿತ್ರಗಳನ್ನೂ ಅವುಗಳ ನಿರ್ಮಾತೃಗಳನ್ನೂ ಅಭಿನಂದಿಸುತ್ತಲೇ ಇವತ್ತಿನ ಕನ್ನಡ ಚಿತ್ರರಂಗದ ಸಾಧ್ಯತೆ–ಸವಾಲುಗಳ ಬಗ್ಗೆ ಅವಲೋಕಿಸುವುದು ಅಗತ್ಯ. ಈ ಅವಲೋಕನದಲ್ಲಿ ಮೊದಲಿಗೆ ಎದ್ದುಕಾಣುವುದು ಸಂಖ್ಯಾಸಮೃದ್ಧಿ!

2018ರಲ್ಲಿ ಭಾರತೀಯ ಬೆಳ್ಳಿಪರದೆಯಲ್ಲಿ ತೆರೆಕಂಡ ಸಿನಿಮಾಗಳ ಸಂಖ್ಯೆ 1776. ಸಾಮಾನ್ಯವಾಗಿ ಹಿಂದಿ ಮತ್ತು ತೆಲುಗು ಭಾಷೆಗಳಲ್ಲಿ ಹೆಚ್ಚು ಸಿನಿಮಾಗಳು ತೆರೆಕಾಣುತ್ತವೆ. ಆದರೆ, ಕಳೆದ ವರ್ಷ ಎಲ್ಲರನ್ನೂ ಹಿಂದಿಕ್ಕಿದ ಕನ್ನಡ, 243 ಚಿತ್ರಗಳನ್ನು ದಾಖಲಿಸಿತು. ಎರಡನೇ ಸ್ಥಾನದಲ್ಲಿರುವ ಹಿಂದಿಯಲ್ಲಿ ತೆರೆಕಂಡ ಸಿನಿಮಾಗಳ ಸಂಖ್ಯೆ 238. ಇಡೀ ವಿಶ್ವದಲ್ಲಿ ಸಿನಿಮಾಗಳ ತಯಾರಿಕೆಯಲ್ಲಿ ಭಾರತ ನಂಬರ್ 1; ಭಾರತದ ಮಟ್ಟಿಗೆ ಕರ್ನಾಟಕವೇ ನಂಬರ್ 1.

ಸಂಖ್ಯಾ ಸಮೃದ್ಧಿಯಷ್ಟೇ ಅಲ್ಲ; ಕನ್ನಡ ಸಿನಿಮಾದ ಮಾರುಕಟ್ಟೆಯೂ ದೊಡ್ಡದಾಗಿದೆ. ಜನಪ್ರಿಯ ಚಿತ್ರಗಳು ವಿದೇಶಗಳಲ್ಲೂ ಪ್ರದರ್ಶನ ಕಾಣುತ್ತಿವೆ. ಇನ್ನೊಂದೆಡೆ ಡಿಜಿಟಲ್ ಪೇಟೆ ಬಾಗಿಲು ತೆರೆದಿದೆ. ಆದಾಯದ ಹೊಸ ಮೂಲಗಳಿಂದಾಗಿ ಕನ್ನಡ ಸಿನಿಮಾಪೇಟೆ ವಿಸ್ತಾರವಾದಂತಾಗಿದೆ. ಹಾಗೆಂದು, ಈ ಪೇಟೆಯಲ್ಲಿ ಎಲ್ಲ ಸಿನಿಮಾಗಳಿಗೂ ವ್ಯಾಪಾರ ಆಗುತ್ತಿದೆಯೇ? ಇಲ್ಲ, ಬೆಂಗಳೂರಿನಲ್ಲಿ ಗಲ್ಲಾಪೆಟ್ಟಿಗೆ ತುಂಬಿಸುವ ತಾರಾ ವರ್ಚಸ್ಸಿನ ಚಿತ್ರವೇ, ಅಮೆರಿಕ–ಸಿಂಗಪುರದಲ್ಲೂ ಸಲ್ಲುತ್ತದೆ. ಪೇಟೆಗೆ ಮನರಂಜನೆಯ ಸರಕು ಬೇಕೇ ಹೊರತು ಮನೋವಿಕಾಸದ ಸಾಧ್ಯತೆಗಳಲ್ಲ. ಶೇಷಾದ್ರಿಯವರ 'ಮೂಕಜ್ಜಿಯ ಕನಸುಗಳು' ಅಥವಾ ಮಂಸೋರೆ ಅವರ 'ನಾತಿಚರಾಮಿ'ಯಂಥ ಚಿತ್ರಗಳು ಸಬ್ಸಿಡಿ–ಪ್ರಶಸ್ತಿಗಳನ್ನು ನೆಚ್ಚಿಕೊಂಡೇ ಉಸಿರಾಡಬೇಕು. ಇದು ಪೇಟೆಯಲ್ಲಿನ ವಾಸ್ತವ.

ಇದೆಲ್ಲ ಬೆಳೆಯ ಮಾತಾಯಿತು. ಬೆಳೆ ಎಂದಮೇಲೆ ಕಳೆ ಇಲ್ಲದಿದ್ದೀತೆ? ಗಟ್ಟಿಕಾಳಿನ ಜೊತೆಗೆ ಜೊಳ್ಳೂ ಇರುತ್ತದಲ್ಲವೇ? ಈ ಪ್ರಶ್ನೆಗಳು ಸಿನಿಮಾಗಳ ಗುಣಮಟ್ಟದ ಬಗ್ಗೆ ಯೋಚಿಸಲು ಅವಕಾಶ ಕಲ್ಪಿಸುತ್ತವೆ.



'ಕೆಜಿಎಫ್', 'ಕುರುಕ್ಷೇತ್ರ', 'ಯಜಮಾನ' – ಹಾಚ್‌ಪಾಚ್ ಅಂತೀವಲ್ಲ, ಹಾಗೆ ತೇಪೆ ಹಾಕಿಕೊಂಡು ಮಾಡಿರುವ, ಟೆಕ್ನಿಕಲಿ ಇನ್ ಕಾಂಪಿಟೆಂಟ್ ಆಗಿರುವ ಸಿನಿಮಾಗಳು. ತಮಿಳು, ಮಲಯಾಳಂನ ಮೇನ್‌ಸ್ಟ್ರೀಮ್ ಸಿನಿಮಾಗಳಿಗೆ ಇರುವ ಪಕ್ವತೆ, ಪರಿಪೂರ್ಣತೆಯನ್ನು ಸಾಧಿಸುವುದು ಕನ್ನಡ ಸಿನಿಮಾಕ್ಕಿನ್ನೂ ಆಗಿಲ್ಲ.

–ಮನು ಚಕ್ರವರ್ತಿ

2018ರಲ್ಲಿ ತೆರೆಕಂಡ ತಮಿಳಿನ **ಪೆರಿಯೇರುಮ್ ಪೆರುಮಾಳ್** ದಲಿತಕಥನವನ್ನು ಸಿನಿಮಾ ಮಾಧ್ಯಮದ ಸಾಧ್ಯತೆಗಳನ್ನು ಬಳಸಿಕೊಂಡು ಹೇಳುವ ಹೊಸ ಕ್ರಮವನ್ನೇ ತೆರೆದಿಟ್ಟಿತ್ತು